ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಕೊಡಗು, ಮಡಿಕೇರಿ

ಸಿ.ಸಿ. :230/2024

ಪಿ.ಡಬ್ಲ್ಯೂಃ 4

ಸಿ.ಡಬ್ಲ್ಯುಃ 8

| | |
|---|---|
| ಸಾಕ್ಷಿದಾರರ ಹೆಸರು | ಸಿ.ವಿ.ಶ್ರೀಧರ್ |
| ತಂದೆಯ ಹೆಸರು | ವಾಸು |
| ಪ್ರಾಯ | **53** ವರ್ಷ |
| ಉದ್ಯೋಗ | ಪಿ.ಎಸ್.ಐ ಮಡಿಕೇರಿ ಸಂಚಾರಿ ಠಾಣೆ |
| ವಾಸಸ್ಥಳ | ಮಡಿಕೇರಿ |

**ದಿಃ18.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಹಿಸಸಅಭಿಯೋಜಕರವರಿಂದಃ**

ನಾನು ದಿಃ**09.08.2023** ರಿಂದ ಮಡಿಕೇರಿ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

**2.** ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ**23.06.2024** ರಂದು ಮಾನ್ಯ ವೃತ್ತ ನಿರೀಕ್ಷಕರು ಈ ಕೇಸಿನ ಮುಂದಿನ ತನಿಖೆಯನ್ನು ನಡೆಸಲು ನನ್ನನ್ನು ನೇಮಿಸಿ ಮೌಖಿಕ ಆದೇಶವನ್ನು ಹೊರಡಿಸಿದ್ದರಿಂದ, ಅದೇ ದಿನ ಈ ಕೇಸಿನ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ **1** ರವರಿಂದ ಸ್ವೀಕರಿ ಪರಿಶೀಲಿಸಿದ್ದೇನೆ. ದಿಃ**28.06.2024** ರಂದು ಚಾಸಾ **2** ರವರಿಂದ **5** ರವರ ಹೇಳಿಕೆಯನ್ನು ದಾಖಲಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡೆ. ಅದೇ ದಿನ ಚಾಸಾ **5** ರವರಿಂದ ಸಾಕ್ಷ್ಯ ಅಧಿನಿಯಂ ಕಲಂ **65** ಬಿ ರಿತ್ಯ ದೃಢೀಕರಣ ಪತ್ರವನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡೆ. ಸದರಿ ದೃಢೀಕರಣ ಪತ್ರದ ಜೊತೆ ಫೋಟೊವನ್ನು

ಹಾಜರು ಮಾಡಿದ್ದು ಅದನ್ನು ಸಹ ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡೆ. ಸಾಕ್ಷಿಗೆ ದೃಢೀಕರಣ ಪತ್ರವನ್ನು ತೋರಿಸಲಾಗಿ ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾರೆ. ಅದನ್ನು ಈಗಾಗಲೇ ನಿಪಿ.6 ಎಂದು ಗುರುತಿಸಿಸಲಾಗಿದ್ದು ಮತ್ತು ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ.6(ಬಿ) ಎಂದು ಗುರುತಿಸಲಾಯಿತು. ನಿಪಿ.6 ರ ಜೊತೆ ಹಾಜರು ಮಾಡಿದ್ದ ಫೋಟೊವನ್ನು ನೋಡಿ ಗುರುತಿಸಿದ್ದೇನೆ. ಅದನ್ನು ಈಗಾಗಲೆ ನಿಪಿ.3 ಎಂದು ಗುರುತಿಸಲಾಗಿದೆ. ಅದೇ ದಿನ ಮಾನ್ಯ ಜಿಲ್ಲಾಧಿಕಾರಿಗಳು ಹೊರಡಿಸಿದ್ದ ಮದ್ಯ ಮಾರಾಟ ನಿಷೇದ ಆದೇಶದ ಯಥಾ ನಕಲನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡೆ. ಸಾಕ್ಷಿಗೆ ಸದರಿ ಆದೇಶದ ಯಥಾ ನಕಲನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದೇನೆ. ಅದನ್ನು ನಿಪಿ.7 ಎಂದು ಮತ್ತು ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ.7(ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ 7 ರವರಿಂದ ರಾಸಾಯನಿಕ ವಿಶ್ಲೇಷಣಾ ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡೆ. ಸಾಕ್ಷಿಗೆ ವಿಶ್ಲೇಷಣಾ ವರದಿಯನ್ನು ತೋರಿಸಲಾಗಿ ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ.8 ಎಂದು ಮತ್ತು ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ.8(ಎ) ಎಂದು ಗುರುತಿಸಲಾಯಿತು. ಅಲ್ಲಿಗೆ ಈ ಕೇಸಿನ ತನಿಖೆ ಪೂರ್ಣಗೊಂಡಿದ್ದರಿಂದ ಮತ್ತು ಆರೋಪಿ ವಿರುದ್ಧ ಸಾಕಷ್ಟು ಸಾಕ್ಷ್ಯದಾರಗಳು ಇದಿದ್ದರಿಂದ ಅದೇ ದಿನ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರವನ್ನು ನಿವೇದಿಸಿಕೊಂಡೆ. ಈ ಕೇಸಿನಲ್ಲಿ ಅಮಾನತು ಪಡಿಸಿದ

ಮಾಲು ನ್ಯಾಯಾಲಯದ ಮುಂದೆ ಇದ್ದು ಅವುಗಳನ್ನು ನೋಡಿ ಗುರುತಿಸಿದ್ದೇನೆ. ಅವು ಈಗಾಗಲೇ ಮು.ಮ.1 ರಿಂದ 12 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎನ್.ಎಸ್.ಎಸ್ ವಕೀಲರಿಂದ**

ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-
(ಸಿ ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.